ಅಸಲು ದಾವಾ ಸಂಖ್ಯೆ .247/2014

ಪಿ.ಡಬ್ಲ್ಯೂ-1
ದಿಃ 25.03.2021
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎನ್ ಎಸ್ ಎಂ ವಕೀಲರಿಂದ ಃ-

ದಾವಾ ಸ್ವತ್ತು ಒಟ್ಟು ವಿಸ್ತೀರ್ಣ 9 ಎಕರೆ 21 ಗುಂಟೆ ಇತ್ತು . ನನ್ನ ತಂದೆಯವರು ಹನುಮಂತಪ್ಪ ತಂದೆ ದಾಸಪ್ಪ ರವರಿಂದ 23 ಮುಕ್ಕಾಲು ಗುಂಟೆ ಖರೀದಿ ಮಾಡಿರುತ್ತಾರೆಂದರೆ ಸರಿ . ಸಾಕ್ಷಿ ಸ್ವತಃ ಹನುಮಂತಪ್ಪರವರ ಹಿಸ್ಸೆಗೆ ಬಂದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ಹನುಮಂತಪ್ಪರವರು ಮೊದಲನೇ ಪ್ರತಿವಾದಿಯ ಗಂಡ ಎಂದರೆ ಸರಿ . ದಾವಾ ಸ್ವತ್ತಿನ ಉತ್ತರ ಭಾಗ 23 ಮುಕ್ಕಾಲು ಗುಂಟೆ ನಾವು ಖರೀದಿ ಮಾಡಿರುತ್ತೇವೆ . ನಿಪಿ 44 ರಲ್ಲಿ ಕಾಣಿಸಲಾದ ಉತ್ತರ ಭಾಗದ ಜಮೀನು ನನ್ನ ತಂದೆಯವರು ಖರೀದಿಸಿದ 23 ಮುಕ್ಕಾಲು ಗುಂಟೆ ಜಮೀನಾಗಿರುತ್ತದೆ ಎಂದರೆ ಸರಿ . ನಿಪಿ 45 ರಲ್ಲಿ ಉತ್ತರ ಭಾಗದ ಜಮೀನು 23 ಮುಕ್ಕಾಲು ಗುಂಟೆ ಜಮೀನು ನನ್ನ ತಂದೆಯವರು ಖರೀದಿ ಮಾಡಿರುವ ಜಮೀನು ಎಂದರೆ ಸರಿಯಲ್ಲ. ಅದು ದಾವಾ ಆಸ್ತಿ ಆಗಿರುತ್ತದೆ.

ನಿಪಿ 44 ಮತ್ತು 45 ರ ಜಮೀನಿನ ಚೆಕ್ಕುಬಂದಿಯ ಉತ್ತರ ಭಾಗದಲ್ಲಿ ತೋರಿಸಲಾದ ಕುಂಟುಬಸಪ್ಪ , ಕರಿಬಸಪ್ಪ ಅದು 1959 ರಲ್ಲಿ ನನ್ನ ತಂದೆ ಕೊಂಡಿರುವ ಜಮೀನು ಎಂದರೆ ಸರಿಯಲ್ಲ. ಅದು ದಾವಾ ಸ್ವತ್ತಾಗಿರುತ್ತದೆ. ಅದು ದಾವಾ ಸ್ವತ್ತಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಪ್ರತಿವಾದಿಯವರ ಹೊಡೆಯುವ ಉದ್ದೇದಿಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.